ಅಸಲು ದಾವಾ ಸಂಃ200/2022
ಪಿ.ಡಬ್ಲ್ಯು:1

**ಸಾಕ್ಷಿಯನ್ನು ಕರೆಯಿಸಿ ಸತ್ಯ ಭೋದನೆ ಮಾಡಿ ಪ್ರಮಾಣೀಕರಿಸಿದ ದಿನಾಂಕ 05.07.2024.**

**ಮುಖ್ಯ ವಿಚಾರಣೆ : ಶ್ರೀ ಸಿ.ಎ.ಎಸ್.ಆರ್. ವಾದಿ ಪರ ವಕೀಲರಿಂದ**

ನನ್ನ ಮುಖ್ಯ ವಿಚಾರಣೆ ಭಾಗವಾಗಿ ಪ್ರಮಾಣಪತ್ರವನ್ನು ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ಸತ್ಯವಾಗಿರುತ್ತದೆ. ಅದನ್ನು ತಿಳಿದುಕೊಂಡು ಸಹಿ ಮಾಡಿರುತ್ತೇನೆ.

ನಾನು ಸ್ವಯಂ ದೃಢೀಕರಿಸಿದ ವಂಶವೃಕ್ಷ ಪ್ರಮಾಣಪತ್ರವನ್ನು ಹಾಜರುಪಡಿಸುತ್ತಿದ್ದೇನೆ, ಅದನ್ನು **ನಿಪಿ1** ಎಂದು ಗುರುತಿಸಲಾಯಿತು.

ನಾನು ದಾವಾ ಸ್ವತ್ತಿಗೆ ಸಂಬಂಧಿಸಿದ ಒಂದು ಗಣಕೀಕೃತ ಮ್ಯುಟೇಷನ್ ಪ್ರತಿ ಹಾಗೂ ಮೂರು ಗಣಕೀಕೃತ ಪಹಣಿ ಪ್ರತಿಗಳನ್ನು ಹಾಜರುಪಡಿಸುತ್ತಿದ್ದೇನೆ, ಅವುಗಳನ್ನು ಕ್ರಮವಾಗಿ **ನಿಪಿ 2 ರಿಂದ 5** ಎಂದು ಗುರುತಿಸಲಾಯಿತು.

ವಾದಿಯು ದಿವಾನಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 7 ನಿಯಮ 14(3) ರಂತೆ ಅರ್ಜಿಯ ಜೊತೆಗೆ ಅದರಲ್ಲಿ ಹೇಳಿರುವಂತೆ ದಾಖಲೆಗಳನ್ನು ಹಾಜರುಪಡಿಸಿರುತ್ತಾರೆ. ಪ್ರತಿವಾದಿಗಳು ಗೈರು ಹಾಜರು ಇದ್ದು, ಆದುದರಿಂದ ಸದರಿ ಅರ್ಜಿಯನ್ನು ಮಾನ್ಯ ಮಾಡಲಾಯಿತು.

ನಾನು ದಿನಾಂಕ 18.11.2021 ರಂದು ನಮ್ಮ ವಕೀಲರ ಮೂಲಕ ಪ್ರತಿವಾದಿಗಳಿಗೆ ನೀಡಿದ ವಕೀಲರ ನೋಟಿಸ್ಸಿನ ಕಛೇರಿ ಪ್ರತಿಯನ್ನು ಹಾಜರುಪಡಿಸುತ್ತಿದ್ದೇನೆ, ಅದನ್ನು **ನಿಪಿ6** ಎಂದು ಗುರುತಿಸಲಾಯಿತು.

ನಾನು ನಾಲ್ಕು ಅಂಚೆ ರಶೀದಿಗಳನ್ನು ಹಾಜರುಪಡಿಸುತ್ತಿದ್ದೇನೆ, ಅವುಗಳನ್ನು ಕ್ರಮವಾಗಿ **ನಿಪಿ7 ರಿಂದ** 10 ಎಂದು ಗುರುತಿಸಲಾಯಿತು.

ನಾನು ನಾಲ್ಕು ಅಂಚೆ ಸ್ವೀಕೃತಿಗಳನ್ನು ಹಾಜರುಪಡಿಸುತ್ತಿದ್ದೇನೆ, ಅವುಗಳನ್ನು ಕ್ರಮವಾಗಿ **ನಿಪಿ11 ರಿಂದ 14** ಎಂದು ಗುರುತಿಸಲಾಯಿತು.

ಆದುದರಿಂದ, ದಾವೆಯನ್ನು ನನ್ನ ಪರವಾಗಿ ಡಿಕ್ರಿಗೊಳಿಸಬೇಕೆಂದು ಪ್ರಾರ್ಥಿಸುತ್ತೇನೆ.

**(ಪ್ರತಿವಾದಿಗಳು ಗೈರು ಹಾಜರು ಇದ್ದು, ಪಾಟೀ ಸವಾಲಿಗೆ ಮುಂದೂಡಲಾಯಿತು)**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೇ ಸ ಇದೆ**

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಗೌರಿಬಿದನೂರು